# ಮಾನಸ್ವಿ

## ಮನದಾಳ...



**ಕನ್ನಡ ಸಿನಿಮಾರಂಗದಲ್ಲಿ ಮೊದಲನೆ ಹೆಜ್ಜೆ ಇಟ್ಟಿರುವ ನಟಿ ಮಾನಸ್ವಿ ಅವರಿಗೆ, ಕೌಟುಂಬಿಕ ಕಥೆಗಳಲ್ಲಿ ಪಾತ್ರ ನಿರ್ವಹಿಸುವ ಹಂಬಲ. ಯುವಜನರ ಸಮಕಾಲೀನ ಸಮಸ್ಯೆಯೊಂದನ್ನು ಕೇಂದ್ರವಾಗಿಟ್ಟುಕೊಂಡ ಚಿತ್ರದಲ್ಲಿ ನಟಿಸಿರುವ ಅವರು, ತಮ್ಮ ಮೊದಲ ಸಿನಿಮಾ ಅನುಭವವನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.**

**■ ಸುಮಲತಾ ಎನ್**

◆ 'ವಿದ್ಯಾರ್ಥಿ ವಿದ್ಯಾರ್ಥಿನಿಯರೇ' ಸಿನಿಮಾದಲ್ಲಿ ನಿಮ್ಮ ಪಾತ್ರ ಏನು ಹೇಳುತ್ತದೆ?

ಸಿನಿಮಾದಲ್ಲಿ ನನ್ನದು ನಿವೇದಿತಾ ಎನ್ನುವ ಪಾತ್ರ. ನಿವೇದಿತಾ, ಮೊಬೈಲ್ ಗೀಳಿಗೆ ಬಿದ್ದ ಹುಡುಗಿ. ಒಂದು ಕ್ಷಣವೂ ಮೊಬೈಲ್ ಬಿಟ್ಟು ಇರುವುದಿಲ್ಲ. ಅಪ್ಪ ಅಮ್ಮನ ಕಾಳಜಿಯಿಲ್ಲದ ಅವಳು, ಪೋಷಕರ ದುಡ್ಡಲ್ಲಿ ಮಜಾ ಮಾಡುವ ಸ್ವಭಾವದವಳು. ನೆಗೆಟಿವ್ ಶೇಡ್ ಹುಡುಗಿ ಎನ್ನಬಹುದು. ಯಾವಾಗಲೂ ಮೊಬೈಲ್ ಪ್ರಪಂಚದಲ್ಲೇ ಮುಳುಗಿ, ವಿಡಿಯೊ ಫೋಟೊಗಳಲ್ಲೇ ಸಮಯ ಕಳೆಯುವವಳು. ಹೀಗಿದ್ದಾಗ ಆಕೆಗೆ ಸಮಸ್ಯೆಯೊಂದು ಎದುರಾಗುತ್ತದೆ. ಯುವಜನತೆಯ ಆ ಸಮಸ್ಯೆಯೊಂದನ್ನು ಇಟ್ಟುಕೊಂಡು 'ವಿದ್ಯಾರ್ಥಿ ವಿದ್ಯಾರ್ಥಿನಿಯರೇ' ಸಿನಿಮಾ ಮೂಡಿಬರುತ್ತಿದೆ.

◆ ಕ್ಯಾಮೆರಾ ಎದುರಿಸಿದ ಮೊದಲ ಅನುಭವ ಹೇಗಿತ್ತು?

ತುಂಬಾ ಹೆದರಿಕೊಂಡಿದ್ದೆ. ಹೆಚ್ಚಿಗೆ ಏನೂ ಗೊತ್ತಿರಲಿಲ್ಲ. ದಿನೇ ದಿನೇ ಆ ಹೆದರಿಕೆ ಕಡಿಮೆಯಾಯಿತು. ಎಲ್ಲವೂ ಅಭ್ಯಾಸವಾಯಿತು.

◆ ನಿಮ್ಮ ನಟನೆಯ ಹಿನ್ನೆಲೆಯೇನು? ಸಿನಿಮಾ ಅವಕಾಶ ದೊರೆತದ್ದು ಹೇಗೆ?

ನನ್ನ ಅಪ್ಪನ ಊರು ಚಿಕ್ಕಮಗಳೂರು, ಅಮ್ಮ ಕುಣಿಗಲ್‌ನವರು. ಹತ್ತನೇ ತರಗತಿ ಆದ ಮೇಲೆ ಶಿಕ್ಷಣದ ಕಾರಣವಾಗಿ ಬೆಂಗಳೂರಿಗೆ ಬಂದಿದ್ದೆ. ಈ ಸಿನಿಮಾ ನಿರ್ದೇಶಕ ಅರುಣ್ ಅಮುಕ್ತ ಅವರು, ಅವಕಾಶ ಮುಂದಿಟ್ಟರು. ನನಗೆ ನಟನೆಯಲ್ಲಿ ಯಾವುದೇ ಹಿನ್ನೆಲೆಯಿರಲಿಲ್ಲ. ಆದರೂ ಆಡಿಷನ್ ನೀಡಿದ್ದೆ. ನನ್ನ ಅಪ್ಪ ಅಮ್ಮನಿಗೆ ನನ್ನನ್ನು ನಟಿಯಾಗಿ ನೋಡುವ ಆಸೆಯೂ ಇತ್ತು. ಆಮೇಲೆ, 'ತರಬೇತಿ ಕೊಟ್ಟರೆ ನೀನು ಚೆನ್ನಾಗಿ ನಟನೆ ಮಾಡಬಲ್ಲೆ' ಎಂದು ನಿರ್ದೇಶಕರು ಧೈರ್ಯ ಕೊಟ್ಟು ಪ್ರೇರೇಪಿಸಿದರು. ಎರಡು ತಿಂಗಳು ಅಭ್ಯಾಸ ಮಾಡಿದೆ. ಕಲಿಕೆಯ ಮೊದಲ ಹೆಜ್ಜೆ ಇಟ್ಟಿದ್ದೇನೆ.

ಈಗ ಹೆಚ್ಚೆಚ್ಚು ಸಿನಿಮಾಗಳನ್ನು ನೋಡುತ್ತಿದ್ದೇನೆ. ಪಾತ್ರಕ್ಕೆ ಯಾವ ರೀತಿ ಅಣಿಯಾಗಬೇಕು ಎಂಬುದನ್ನು ಕಲಿತುಕೊಳ್ಳುತ್ತಿದ್ದೇನೆ. ಕಂಟೆಂಟ್‌ಗಳ ಬಗ್ಗೆಯೂ ತಿಳಿದುಕೊಳ್ಳುತ್ತಿದ್ದೇನೆ.

◆ ಯಾವ ರೀತಿಯ ಸಿನಿಮಾ ಕಥೆಗಳು ನಿಮ್ಮನ್ನು ಸೆಳೆಯುತ್ತವೆ?

ನನಗೆ ಕೌಟುಂಬಿಕ ಕಥೆಯ ಸಿನಿಮಾಗಳು ಇಷ್ಟ. ನನಗೂ ಅಂಥ ಕಥೆಗಳಲ್ಲಿ ತೊಡಗಿಕೊಳ್ಳಬೇಕೆಂಬ ಆಸೆಯಿದೆ. ಜೊತೆಗೆ, ಹೆಣ್ಣು ಮಕ್ಕಳ ಕುರಿತ ಸಿನಿಮಾದಲ್ಲಿ ನಟಿಸಬೇಕೆಂದು ತುಂಬಾ ಇಷ್ಟ.

◆ ಸಿನಿಮಾರಂಗದ ಹೊರತಾಗಿ ನಿಮ್ಮ ಕನಸುಗಳು?

ಡಿಗ್ರಿ ಮೊದಲ ವರ್ಷದಲ್ಲಿದ್ದೇನೆ. ಸದ್ಯ ಶಿಕ್ಷಣ ಮುಂದುವರೆಸುತ್ತೇನೆ. ಸಿ.ಎ. ಆಗಬೇಕು ಎಂಬ ಆಸೆಯೂ ಇದೆ. ■